# ವಚನಗಳ ಪ್ರಕೃತಿ ಮೀಮಾಂಸೆಯಲ್ಲಿ ಪರಂಪರೆ ಮತ್ತು ಆಧುನಿಕತೆ

**ಸವಿತಾ ರವಿಶಂಕರ್**

ಕನ್ನಡ ಸಹಾಯಕ ಪ್ರಾಧ್ಯಾಪಕರು, ಕಲಾ ಮತ್ತು ಮಾನವಿಕ ವಿಭಾಗ, ಕ್ರೈಸ್ಟ್ ಅಕಾಡೆಮಿ ಇನ್ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್, ಬೆಂಗಳೂರು.

DOI: https://doi.org/10.5281/zenodo.15795786

## ABSTRACT:

ಜಗತ್ತಿನ ಗ್ರಹಿಕೆಯ ಭಾಗವಾಗಿರುವ ರೂಪಕದ ಹಿನ್ನಲೆಯಲ್ಲಿ ಪ್ರಕೃತಿ ಸೌಂದರ್ಯ ಪ್ರಜ್ಞೆ ಅಕ್ಕನ ವಚನಗಳಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ ಎಂಬುದು ನನ್ನ ಇವತ್ತಿನ ಆಸಕ್ತಿಯ ಭಾಗ. ರೂಪಕ ಎಂದರೆ ಅಲಂಕಾರ, ಅಲಂಕಾರ ಎಂದರೆ ಸೌಂದರ್ಯ, ಸೌಂದರ್ಯ ಎಂದರೆ ಪ್ರಕೃತಿ. ಪ್ರಕೃತಿಯಲ್ಲಿ ಅವಳು ಕಂಡುಕೊಂಡ ಬದುಕು ಆ ಬದುಕೇ ಭಕ್ತಿಯಾದ ಬಗೆ ಅಕ್ಕನಲ್ಲಿ ಮುಖ್ಯವಾದದ್ದು. ಪ್ರಕೃತಿ ಅವಳ ಭಾವನೆಗಳ ಸಂವಹನ ಮಾಧ್ಯಮ. ಪ್ರಕೃತಿಯನ್ನು ಮೂರು ಭಾಗವನ್ನಾಗಿ ಮಾಡಿಕೊಂಡು ಅಕ್ಕನ ವಚನಗಳಲ್ಲಿ ನೋಡಬಯಸುತ್ತೇನೆ.

ಮರ, ಬೆಟ್ಟ, ಪ್ರಾಣಿ, ಪಕ್ಷಿಗಳ ಹಿನ್ನಲೆಯಲ್ಲಿ ಅವಳ ವಚನಗಳನ್ನು ಗುರುತಿಸುವ ಪ್ರಯತ್ನವಿದೆ. ಅಂದರೆ ಪರಿಸರದೊಂದಿಗಿನ ಚಲನೆ. (ಅರಿವಿನ ಕದಳಿಯೇ ಆಗುವ ಪ್ರಕೃತಿ)

ದೇಹ, ಇಂದ್ರಿಯಗಳ ಒಡನಾಟಗಳಲ್ಲಿನ ಅನುಸಂಧಾನದ ವಚನಗಳು. (ದೇಹ, ಇಂದ್ರಿಯಗಳು ಪ್ರಕೃತಿ ಮೀಮಾಂಸೆಯಾಗುವ ವಚನಗಳು)

ಸಮಾಜ, ಸಂಸ್ಕೃತಿ ಕುರಿತ ನಿಲುವುಗಳಲ್ಲಿನ ದ್ವಂದ್ವಗಳ ಬಗೆಹರಿಸಿದ ತಾಣ ವಚನಗಳು. ಅದನ್ನು ಪ್ರಕೃತಿಯ ಮೂಲಕ ಸಮೀಕರಿಸಿಕೊಳ್ಳುವುದೋ ಹೋಲಿಸಿಕೊಳ್ಳುವುದೋ ವಚನಗಳಲ್ಲಿ ಅಕ್ಕ ಕೈಗೊಳ್ಳುವುದನ್ನು ಗುರುತಿಸಲು ಪ್ರಯತ್ನಿಸಿದೆ.

(ಪ್ರಕೃತಿ ಮೀಮಾಂಸೆಯ ಮಾನುಷ ಲೋಕ)

ಈ ಮೇಲಿನ ವಿಭಾಗೀಕರಣದಲ್ಲಿ ಅಕ್ಕಳ ಸೌಂದರ್ಯಪ್ರಜ್ಞೆ ಭಾಷೆಯ ನೆಲೆಯಲ್ಲಿ ಮೊದಲಿಗೆ ಗುರುತಿಸಬಹುದು. ಅವಳ ಭಾವ ಅನುಭಾವಗಳ ವಿಶ್ಲೇಷಣೆ ತನಗೆ ಸ್ಪಷ್ಟಗೊಳಿಸಿಕೊಳ್ಳುವ ನೆಲೆಗಳು ಕಾವ್ಯಾತ್ಮಕ, ಉಪಮೆ, ರೂಪಕಗಳಲ್ಲಿ ಅಡಗಿರುವುದು ಕಾಣುತ್ತೇವೆ. ತತ್ವ ಚಿಂತನೆ, ಪರಂಪರೆಯ ಮುಂದುವರೆದ ಭಾಗದ ವಿವೇಚನೆಗಳು, ಜಿಜ್ಞಾಸೆಗಳು, ಸಿದ್ಧಾಂತರೀತಿಯ ವಿಚಾರಗಳು ಗದ್ಯಾತ್ಮಕವಾಗಿ ವಚನಗಳಲ್ಲಿ ಹರಿದಿರುವುದು ಕಾಣುತ್ತೇವೆ.

ಈ ಲೇಖನದಲ್ಲಿ ಕಾವ್ಯಾತ್ಮಕವಾದ ಕೆಲವು ವಚನಗಳನ್ನು ಆರಿಸಿಕೊಂಡು ಪ್ರಕೃತಿಯ ಸೌಂದರ್ಯ ಪ್ರಜ್ಞೆಯ ಮೂರು ಮುಖಗಳು ಅವಳಿಗೆ ಏನೆಲ್ಲ ಆಗಿತ್ತು ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಲು ಬಯಸುತ್ತೇನೆ.

**KEYWORDS:**

ಪ್ರಕೃತಿ, ಮೀಮಾಂಸೆ, ಮಾನುಷ ಲೋಕ, ಕದಳಿ, ಸೌಂದರ್ಯಪ್ರಜ್ಞೆ, ದೇಹ, ಇಂದ್ರಿಯ.

ಜಗತ್ತಿನ ಗ್ರಹಿಕೆಯ ಭಾಗವಾಗಿರುವ ರೂಪಕದ ಹಿನ್ನಲೆಯಲ್ಲಿ ಪ್ರಕೃತಿ ಸೌಂದರ್ಯ ಪ್ರಜ್ಞೆ ಅಕ್ಕನ ವಚನಗಳಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ ಎಂಬುದು ನನ್ನ ಇವತ್ತಿನ ಆಸಕ್ತಿಯ ಭಾಗ. ರೂಪಕ ಎಂದರೆ ಅಲಂಕಾರ, ಅಲಂಕಾರ ಎಂದರೆ ಸೌಂದರ್ಯ, ಸೌಂದರ್ಯ ಎಂದರೆ ಪ್ರಕೃತಿ. ಪ್ರಕೃತಿಯಲ್ಲಿ ಅವಳು ಕಂಡುಕೊಂಡ ಬದುಕು ಆ ಬದುಕೇ ಭಕ್ತಿಯಾದ ಬಗೆ ಅಕ್ಕನಲ್ಲಿ ಮುಖ್ಯವಾದದ್ದು. ಪ್ರಕೃತಿ ಅವಳ ಭಾವನೆಗಳ ಸಂವಹನ ಮಾಧ್ಯಮ. ಪ್ರಕೃತಿಯನ್ನು ಮೂರು ಭಾಗವನ್ನಾಗಿ ಮಾಡಿಕೊಂಡು ಅಕ್ಕನ ವಚನಗಳಲ್ಲಿ ನೋಡಬಯಸುತ್ತೇನೆ.

ಮರ, ಬೆಟ್ಟ, ಪ್ರಾಣಿ, ಪಕ್ಷಿಗಳ ಹಿನ್ನಲೆಯಲ್ಲಿ ಅವಳ ವಚನಗಳನ್ನು ಗುರುತಿಸುವ ಪ್ರಯತ್ನವಿದೆ. ಅಂದರೆ ಪರಿಸರದೊಂದಿಗಿನ ಚಲನೆ. (ಅರಿವಿನ ಕದಳಿಯೇ ಆಗುವ ಪ್ರಕೃತಿ)

ದೇಹ, ಇಂದ್ರಿಯಗಳ ಒಡನಾಟಗಳಲ್ಲಿನ ಅನುಸಂಧಾನದ ವಚನಗಳು. (ದೇಹ, ಇಂದ್ರಿಯಗಳು ಪ್ರಕೃತಿ ಮೀಮಾಂಸೆಯಾಗುವ ವಚನಗಳು)

ಸಮಾಜ, ಸಂಸ್ಕೃತಿ ಕುರಿತ ನಿಲುವುಗಳಲ್ಲಿನ ದ್ವಂದ್ವಗಳ ಬಗೆಹರಿಸಿದ ತಾಣ ವಚನಗಳು. ಅದನ್ನು ಪ್ರಕೃತಿಯ ಮೂಲಕ ಸಮೀಕರಿಸಿಕೊಳ್ಳುವುದೋ ಹೋಲಿಸಿಕೊಳ್ಳುವುದೋ ವಚನಗಳಲ್ಲಿ ಅಕ್ಕ ಕೈಗೊಳ್ಳುವುದನ್ನು ಗುರುತಿಸಲು ಪ್ರಯತ್ನಿಸಿದೆ.

(ಪ್ರಕೃತಿ ಮೀಮಾಂಸೆಯ ಮಾನುಷ ಲೋಕ)

ಈ ಮೇಲಿನ ವಿಭಾಗೀಕರಣದಲ್ಲಿ ಅಕ್ಕಳ ಸೌಂದರ್ಯಪ್ರಜ್ಞೆ ಭಾಷೆಯ ನೆಲೆಯಲ್ಲಿ ಮೊದಲಿಗೆ ಗುರುತಿಸಬಹುದು. ಅವಳ ಭಾವ ಅನುಭಾವಗಳ ವಿಶ್ಲೇಷಣೆ ತನಗೆ ಸ್ಪಷ್ಟಗೊಳಿಸಿಕೊಳ್ಳುವ ನೆಲೆಗಳು ಕಾವ್ಯಾತ್ಮಕ, ಉಪಮೆ, ರೂಪಕಗಳಲ್ಲಿ ಅಡಗಿರುವುದು ಕಾಣುತ್ತೇವೆ. ತತ್ವ ಚಿಂತನೆ, ಪರಂಪರೆಯ ಮುಂದುವರೆದ ಭಾಗದ ವಿವೇಚನೆಗಳು, ಜಿಜ್ಞಾಸೆಗಳು, ಸಿದ್ಧಾಂತರೀತಿಯ ವಿಚಾರಗಳು ಗದ್ಯಾತ್ಮಕವಾಗಿ ವಚನಗಳಲ್ಲಿ ಹರಿದಿರುವುದು ಕಾಣುತ್ತೇವೆ.

ಈ ಲೇಖನದಲ್ಲಿ ಕಾವ್ಯಾತ್ಮಕವಾದ ಕೆಲವು ವಚನಗಳನ್ನು ಆರಿಸಿಕೊಂಡು ಪ್ರಕೃತಿಯ ಸೌಂದರ್ಯ ಪ್ರಜ್ಞೆಯ ಮೂರು ಮುಖಗಳು ಅವಳಿಗೆ ಏನೆಲ್ಲ ಆಗಿತ್ತು

ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಲು ಬಯಸುತ್ತೇನೆ.

ಅರಿವಿನ ಕದಳಿಯೇ ಪ್ರಕೃತಿಯಾಗುವ ಚಲನೆ:

(ಮರ, ಬೆಟ್ಟ, ಪ್ರಾಣಿ–ಪಕ್ಷಿಗಳು.)

ಅಕ್ಕಳಿಗೆ ಬದುಕು–ಪ್ರಕೃತಿ ನಡುವೆ ಭಿನ್ನತೆ ಇರಲಿಲ್ಲ. ಅವಳು ಕಂಡುಕೊಂಡ ಸತ್ಯಗಳ ಅನಾವರಣಕ್ಕೆ ಕಂದೀಲುಗಳಾಗಿದ್ದವು. ಬೆಳಕಿನ ಹಾದಿಯಲ್ಲಿ ಬೆಳಕಾಗಿ, ಪ್ರಕೃತಿಯ ಸೌಂದರ್ಯವೇ ತಾನಾಗಿ, ಬಯಲಾಗಿ ಬದಲಾದವಳು. 'ಬೆಟ್ಟ, ವನ, ಹಕ್ಕಿ'ಗಳು,

'ಕಾಯ, ಕರಣ'ದ ರೂಪಕದ ಹಿನ್ನಲೆಯಲ್ಲಿ, ಸಮಾಜ ಕುರಿತ ವಚನಗಳಲ್ಲಿ

'ತನ್ನತನ' ಎಂಬುದನ್ನು ಹೇಗೆ ಕಂಡುಕೊಂಡಳು ಎಂಬುದನ್ನು ಚರ್ಚಿಸಲು ಪ್ರಯತ್ನಿಸುವೆ.

**ಗಂಗೆಯೊಡನಾಡಿದ ಘಟ್ಟ ಬೆಟ್ಟಂಗಳು ಕೆಟ್ಟಕೇಡ ನೋಡಿರಯ್ಯ,**
**ಅಗ್ನಿಯೊಡನಾಡಿದ ಕಾಷ್ಟಂಗಳು ಕೆಟ್ಟಕೇಡ ನೋಡಿರಯ್ಯ,**
**ಜ್ಯೋತಿಯೊಡನಾಡಿದ ಅಜ್ಞಾನಿ ಕೆಟ್ಟಕೇಡ ನೋಡಿರಯ್ಯ. ಎಲೆ ಪರಶಿವಮೂರ್ತಿ ಹರನೆ,**
**ನಿಮ್ಮ ಜಂಗಮಲಿಂಗದೊಡನಾಡಿ ಎನ್ನ ಭವಾದಿ ಭವಂಗಳು ಕೆಟ್ಟಕೇಡ ನೋಡಿರಯ್ಯ.**
**ಎಲೆ ಪರಶಿವಮೂರ್ತಿ ಹರನೆ, ನಿಮ್ಮ ಜಂಗಮಲಿಂಗದೊಡನಾಡಿ ಎನ್ನ ಭವಾದಿ ಭವಂಗಳು**
**ಕೆಟ್ಟಕೇಡ ನೋಡಾ, ಚನ್ನಮಲ್ಲಿಕಾರ್ಜುನ.**

ಗಂಗೆಯೊಡನಾಡಿದ ಬೆಟ್ಟ ತನ್ನ ಅಸ್ತಿತ್ವ ಕಳೆದುಕೊಂಡು ಗಂಗೆಯಾದಂತೆ, ಬೆಂಕಿಯೊಡನಾಡಿದ ಕಾಷ್ಠವು ಬೆಂಕಿಯೇ ಆದಂತೆ, ಜ್ಯೋತಿಯೊಂದಿಗೆ ಸೇರಿದ ಕತ್ತಲು ಬೆಳಕಾದಂತೆ, ಜ್ಞಾನಿಯೊಡನಾಡಿದ ಅಜ್ಞಾನಿ ತನ್ನ ಸ್ವರೂಪ ಕಳೆದುಕೊಂಡಂತೆ, ಅವರೊಡನಾಡಿ 'ನನ್ನ ಭವ' ಬದಲಾಯಿತು ಎನ್ನುತ್ತಾಳೆ. ಪ್ರಕೃತಿಯ ಅಗಾಧತೆಯೊಂದಿಗೆ ಜಂಗಮರ ಸಹವಾಸವನ್ನು, ಅವರ ಸಾನಿಧ್ಯದ ಶಕ್ತಿಯನ್ನು, ಅವರೊಂದಿಗೆ ದೈವವನ್ನು ಅರಿತ ಬಗೆಯನ್ನು ಹೇಳುತ್ತಾಳೆ.

**2. ಒಡಲ ಕಳವಳಕ್ಕಾಗಿ ಅಡವಿಯ ಪೊಕ್ಕೆನು. ಗಿಡುಗಿಡುದುಪ್ಪದೆ ಬೇಡಿದೆನೆನ್ನಂಗಕ್ಕೆಂದು. ಅವು**
**ನೀಡಿದವು ಲಿಂಗಕ್ಕೆಂದು. ಆನು ಬೇಡಿ ಭವಿಯಾದೆನು. ಅವು ನೀಡಿ ಭಕ್ತರಾದವು. ಇನ್ನು**
**ಬೇಡಿದೆನಾದಡೆ ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮಾಣೆ.**

ಬೇಡುವುದು ಭವಿಯ ಲಕ್ಷಣ. ನೀಡುವುದು ಭಕ್ತನ ಲಕ್ಷಣ. ಇನ್ನು ಬೇಡಲಾರೆ ಯಾರನ್ನು ಏನನ್ನು. ಬದುಕು, ಭಕ್ತಿಯ ಹಾದಿ ಎಚ್ಚರದ ಸಾಧನೆಯದಲ್ಲ. ಪ್ರಕೃತಿಯ ಹಾಗೆ ಅದು ಸ್ವಭಾವವೇ ಆಗಿಬಿಡಬೇಕು. ಹಣ್ಣು ನೀಡುವುದು ಹೇಗೆ ಮರದ ಲಕ್ಷಣವೋ ಹಾಗೆ ಮರ, ಭಕ್ತನಲ್ಲಿ ವ್ಯತ್ಯಾಸವೇ ಇಲ್ಲ. ನಿರೀಕ್ಷೆಗಳಿಲ್ಲದೆ ನಡೆಯುವ ಗುಣ ಅವನದಾಗಬೇಕು. ತಾನು ಹಾಗೂ ತನ್ನ ಭಕ್ತಿ ಹಾಗೆ ಬದಲಾಗಬೇಕು ಎಂಬುದೇ

ಅವಳ ವಿವೇಕ ಕಂಡುಕೊಂಡ ಪ್ರಜ್ಞೆ. ಪರಿಸರ ಅವಳಿಗೆ ಗುರುವಾದ ಬಗೆ ಇದಾಗಿದೆ.

ವನವೆಲ್ಲ ಕಲ್ಪತರು ಗಿಡವೆಲ್ಲ ಮರುಜವಣಿ, ಶಿಲೆಗಳೆಲ್ಲಾ ಪರುಷ, ನೆಲವೆಲ್ಲಾ ಅವಿಮುಕ್ತಿ ಕ್ಷೇತ್ರ, ಜಲವೆಲ್ಲ ನಿರ್ಜರಾಮೃತ, ಮೃಗವೆಲ್ಲಾ ಪುರುಷಾಮೃಗ, ಎಡಹುವ ಹರಳೆಲ್ಲಾ ಚಿಂತಾಮಣಿ. ಚೆನ್ನಮಲ್ಲಿಕಾರ್ಜುನಯ್ಯನ ನೆಚ್ಚಿನ ಗಿರಿಯ ಸುತ್ತಿ ನೋಡುತ್ತ ಬಂದು ಕದಳಿಯ ಬನವ ಕಂಡೆ ನಾನು.

ವನವೆಲ್ಲಾ ನೀನೆ ವನದೊಳಗಿನ ದೇವತರುವೆಲ್ಲ ನೀನೆ ತರುವಿನೊಳಗಾಡುವ ಖಗಮೃಗ ಪ್ರಾಣಿಗಳೆಲ್ಲ ನೀನೆ ಚನ್ನಮಲ್ಲಿಕಾರ್ಜುನಾ ಸರ್ವಭರಿತನಾಗಿ ಎನಗೇಕೆ ಮೂಖ ತೋರಾ. (ವಚನ ಸಂಖ್ಯೆ 365)

ಇಲ್ಲಿ ಎರಡು ವಚನಗಳಿವೆ. ಕಾಡಿನ ಸೌಂದರ್ಯದ ಅಭಿವ್ಯಕ್ತಿ ಅದರ ವಿಶೇಷತೆ ಕಂಡು ಅನುಭವಿಸುತ್ತಿರುವ ಮನಸ್ಸು ಇಲ್ಲಿದೆ. ಒಂದು ದೈವದ ನಿಶ್ಚಿತ ಭಾವದ ಅಭಿವ್ಯಕ್ತಿಯಾಗಿ ಕಂಡುಬಂದರೆ ಮತ್ತೊಂದು ಸರ್ವಸಂಪನ್ನನಾಗಿರುವ ನೀನು ನನಗೆ ಮುಖ ತೋರಲಾರೆಯ ಎಂಬ ಬೇಡಿಕೆಯೂ ಇದೆ. ಎರಡು ಭಿನ್ನ ಭಾವ. ಕಾಡಿನ ಸಮಸ್ತವೂ ನೀನೆ ಎಂದು ಒಂದು ವಚನ ಹೇಳಿದರೆ ಮತ್ತೊಂದು ಕಾಡಿನ ಸಮಸ್ತದೊಂದಿಗೆ ಮುಖ ತೋರಲಾರೆಯಾ ಎಂಬ ಬೇಡಿಕೆಯೊಂದಿಗೆ ಮತ್ತೊಂದು ಮೂಡುತ್ತದೆ. ಪ್ರಕೃತಿ ಸೌಂದರ್ಯ ಎಂಬುದು ಭಗವಂತನ ಇರುವಿನ ಸ್ಥಳ, ಅನುಭೂತಿಯ ಭಾಗವೇ ಎಂಬ ಭಾವ ನಮ್ಮೊಳಗು ಮೂಡುವಂತೆ ಭಾಷೆ ಸಮರ್ಥವಾಗಿ ಬಳಕೆಯಾಗಿರುವುದು ಕಾಣುತ್ತೇವೆ.

ಒಂದು ಇಂದ್ರಿಯದ ಅನುಭವ ಮತ್ತೊಂದು ಇಂದ್ರಿಯದ ಅನುಭವವಾಗಿ ಬದಲಾಗುವುದೇ ಆಧ್ಯಾತ್ಮ ಎಂದು ಮೊನ್ನೆ 'ಲಕ್ಷ್ಮೀಷ ತೋಳ್ಪಾಡಿ'ಯವರು ತಮ್ಮ ಭಾಷಣವೊಂದರಲ್ಲಿ ಹೇಳುತ್ತಿದ್ದರು. ಅಕ್ಕಳಿಗಾದ ದೈವದ ಅನುಭವ ಕಣ್ಣಿನ ಭಾಗವಾಗಿ, ಓದುಗನ ಓದಿನ ಭಾಗವಾಗಿ ಇಂದು ಕೇಳುಗರಾದ ನಿಮ್ಮೆಲ್ಲರ ಭಾಗವಾಗಿ ಬದಲಾಗುತ್ತಿರುವುದು ಒಂದು ಸೋಜಿಗವೇ ನನಗೆ. ಎಲ್ಲವೂ ಶ್ರೇಷ್ಠವೇ ಅವಳ ಕಣ್ಣಲ್ಲಿ. ವನ, ಗಿಡ, ಶಿಲೆ, ನೆಲ, ಜಲ, ಮೃಗ, ಗಿರಿ ಎಲ್ಲವು ಎಲ್ಲಾ ಕಡೆಯೂ ಕಾಣಸಿಗುವಂಥದ್ದು ಆದರೆ ಅವಳೊಳಗಿನ ದೈವದ ಸ್ಪರ್ಶಕ್ಕೆ ಒಳಗಾಗಿ ಅವಳಿಗೆ ಕಲ್ಪತರು, ಸಂಜೀವಿನಿ, ಸ್ಪರ್ಶಮಣಿ, ಅಮೃತ, ಕಸ್ತೂರಿ ಚಿಂತಾಮಣಿಯಾಗಿ ಕೊನೆಯಲ್ಲಿ ಕಾಡು ಕದಳಿಯಾಗಿ ಆ ಸೌಂದರ್ಯ ಮಲ್ಲಿಕಾರ್ಜುನನಾಗಿ ಅವಳಿಗೆ ದೊರಕಿದೆ. ಅವಳೊಳಗಿನ ದೈವ ಪ್ರಕೃತಿಯಲ್ಲಿ ಆವಿರ್ಭವಿಸಿ ಜಗತ್ತಿನ ಕಲ್ಪನೆಯ ಶ್ರೇಷ್ಠವಸ್ತುವಾಗಿ ಬದಲಾಗಿದೆ. ತನ್ನೊಳಗಿನ ದೈವ ಹೊರಬಂದು ಕಂಡಂತೆ ಭಾವದ ಅನುಭೂತಿಗೆ ಒಳಗಾಗುತ್ತಿರುವುದು ಕಾಣುತ್ತೇವೆ. ಶಿವನಿಲ್ಲಿ ಜಡನಲ್ಲ ಚೈತನ್ಯ ಪೂರ್ಣವಾಗಿ ಅಣುರೇಣು ತೃಣಕಾಷ್ಠಗಳಲ್ಲಿ ದೈವವನ್ನು ಕಾಣುತ್ತಿರುವ ರೀತಿ ನಮಗಿಲ್ಲಿ ಗೋಚರವಾಗುತ್ತಿದೆ. ವಚನದಲ್ಲಿ ಪ್ರಕೃತಿ

ಸೌಂದರ್ಯ ಕಲ್ಪನೆ ಆ ಅನುಭವದ ಶಕ್ತಿಯನ್ನು ಪಡೆದು ಅನುಭಾವದ ಶಕ್ತಿಯಂತೆ ಮೈದಳೆಯುತ್ತಿದೆ.

**ಚಿಲಿಮಿಲಿ ಎಂದೋದುವ ಗಿಳಿಮರಿಗಳಿರಾ ನೀವು ಕಾಣಿರೆ ನೀವು ಕಾಣಿರೆ**
**ಸ್ವರವೆತ್ತಿ ಪಾಡುವ ಕೋಗಿಲೆಗಳಿರಾ ನೀವು ಕಾಣಿರೆ ಕಾಣಿರೆ---(211)**
**ಅಳಸಂಕುಲವೆ, ಮಾಮರವೆ, ಬೆಳೆದಿಂಗುಳೆ, ಮಾಮರವೆ ನಿಮ್ಮನೆಲ್ಲರನು ಒಂದು ಬೇಡುವೆನು**
**ನನ್ನೊಡೆಯ ಚನ್ನಮಲ್ಲಿಕಾರ್ಜುನ ಕಂಡೊಡೆ ಕರೆದು ತೋರಿರೆ-(52)**
**ಗಿರಿಯಲಲ್ಲದೆ ಹುಲುಮೊರಡಿಯಲ್ಲಾಡುವುದೆ ನವಿಲು, ಕೊಳಕ್ಕಲ್ಲದೆ ಕಿರುವೆಳ್ಳಕ್ಕೆಳಸುವುದೆ ಹಂಸೆ**
**ಮಾಮರ ತಳಿತಲ್ಲದೆ ಸರಗೈವುದೆ ಕೋಗಿಲೆ? ಎನ್ನ ದೇವ ಚನ್ನಮಲ್ಲಿಕಾರ್ಜುನಂಗಲ್ಲದೆ**
**ಅನ್ಯಕ್ಕೆಳಸುವುದೇ ಎನ್ನ ಮನ..(196)**

ಪ್ರಕೃತಿ ಮೃದು ಮಧುರ ಭಾಷಿಕರನ್ನೆ ತನ್ನೊಂದಿಗೆ ಹೊಂದಿರುವಂಥದ್ದು. ಹಕ್ಕಿಗಳು ಸ್ವರ್ಗದ ಪ್ರತಿನಿಧಿಗಳು ಎಂಬ ಭಾವ ಕ್ರೈಸ್ತರ ಬೈಬಲ್ ನಲ್ಲಿ ಕಾಣುತ್ತೇವೆ. ಅಕ್ಕನಲ್ಲೂ ಇಂಥದ್ದೇ ಅನುಭೂತಿ ದೈವದ ಹಾದಿ ನೆಲೆ ಅರಿತಿರುವಂಥವು ಹಕ್ಕಿಗಳು ಎಂಬುದು ಪರಂಪರೆ ಕೊಟ್ಟಿದ್ದಾದರೆ, ಒಮ್ಮೆ ಅವುಗಳನ್ನೇ ಪ್ರಶ್ನಿಸುತ್ತಾಳೆ, ನೀವು ಕಂಡುಕೊಂಡ ಹಾದಿಯನ್ನೇ ನನಗು ತಿಳಿಸಿರಿ ಎಂದು ಬೇಡುತ್ತಾಳೆ. ಅವನ ಇರುವನ್ನು ಅರಿತಿರುವ ಹಕ್ಕಿಗಳು ನನಗೂ ಅವನನ್ನು ಕಾಣಲು ತಿಳಿಸಿ ಎನ್ನುತ್ತಲೇ, ತನ್ನೊಳಗಿನ ಅವನ ಇರುವನ್ನು ಕಂಡುಕೊಳ್ಳುವ ಹಾದಿಗೆ ನೆರವಾಗುವ ಹಕ್ಕಿಗಳನ್ನು ಪ್ರಶ್ನಿಸುತ್ತಲೇ ಸಾಗುತ್ತಾಳೆ. ಹಕ್ಕಿಯೊಳಗಿನ ದೈವವನ್ನು ಅರಿಯಲು ಪ್ರಯತ್ನಿಸುತ್ತಾಳೆ. ಹುಲ್ಲಿನ ಬಳಿಯಷ್ಟೇ ಆಡುವ ನವಿಲಿಗೆ, ಮಾವಿನ ಹಸಿರಿಗೆ ಹಾಡುವ ಕೋಗಿಲೆಗೆ ನೀರಿನ ಸಮೀಪ ಮಾತ್ರ ಕಾಣುವ ಹಂಸೆಗೆ ನಿಮ್ಮಂತೆ ನನ್ನ ಮನವು ಮಲ್ಲಿಕಾರ್ಜುನನಲ್ಲದೆ ಬೇರೆಯಾವುದಕ್ಕೂ ಹರಿಯದೆನ್ನುತ್ತ ತನ್ನೊಳಗಿನ ದೈವನನ್ನು ಅರಿಯಲು, ಸ್ಪಷ್ಟಪಡಿಸಿಕೊಳ್ಳಲು ಪ್ರಯತ್ನಿಸುತ್ತಾಳೆ.

ಸರ್ಪನ ಬಾಯ ಕಪ್ಪೆ ನೊಣಕ್ಕೆ ಹಾರುವಂತೆ ಆಪ್ಯಾಯನ ಬಿಡದು, ಕಾಯವರ್ಪಿತವೆಂಬ ಹುಸಿಯ ನೋಡಾ. ನಾನು ಭಕ್ತಳೆಂಬ ನಾಚಿಕೆಯು ನೋಡಾ. ನಾನು ಯುಕ್ತಳೆಂಬ ಹೇಸಿಕೆಯ ನೋಡಾ. ಓಗರವಿನ್ನಾಗದು. ಪ್ರಸಾದ ಮುನ್ನಿಲ್ಲ. ಚೆನ್ನಮಲ್ಲಿಕಾರ್ಜುನಯ್ಯ ಉಪಚಾರದರ್ಪಿತವನವಗಡಿಸಿ ಕಳೆವ.

ಹಾವು ಕಪ್ಪೆ ಆಹಾರ ಚಕ್ರದ ಬಗ್ಗೆ ಜೀವಸರಪಳಿ ಅದು ಹೇಗೆ ಅದರ ನಿಯಂತ್ರಣದಲ್ಲಿ ಇದೆ ಎಂಬುದರ ಬಗ್ಗೆ ತಿಳಿಸುತ್ತಲೇ ಭಕ್ತಿ ಎಂಬ ಸಾಮಾಜಿಕ ಕಲ್ಪನೆಯ ದೋಷಗಳಾದ ನನ್ನನ್ನೇ ಅರ್ಪಿಸಿಕೊಂಡೆ ಎಂಬ ಮಾತುಗಳು ಹಾಲು ಹಣ್ಣು ನೀರು ನಿನಗರ್ಪಿಸಿದೆ ಎಂಬ ಅಂಶಗಳು, ನಾನು ಮಾತ್ರ ನನ್ನ ಕ್ರಮ ಮಾತ್ರ ಸರಿ ಎಂಬ ಭಾವನೆಗಳು ಎಲ್ಲವು ಉಪಚಾರದ ಮಾತುಗಳಂತೆ ಅವುಗಳನ್ನು ಕಡೆಗಣಿಸಿ ಭಕ್ತಿಯ ನಿಜ ಸ್ವರೂಪವನ್ನು ಮನವರಿಕೆ ಮಾಡಿಸುವ ಈ ವಚನದಲ್ಲೂ

ಪ್ರಕೃತಿಯ ಅಂಶಗಳಾದ ಹಾವು ಕಪ್ಪೆ ಬಳಕೆಗೆ ಬರುವುದು ಕಂಡಾಗ ಪ್ರಕೃತಿಯ ಎಲ್ಲ ಸ್ವರೂಪ ಅವಳ ಬದುಕಿನ ಕನ್ನಡಿ ರೀತಿಯ ಅಭಿವ್ಯಕ್ತಿ ಆಗಿತ್ತು ಎನ್ನಬಹುದು.

ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗೆ ಅಂಜಿದಡೆ ಎಂಥಯ್ಯ, ಸಮುದ್ರದ ದಡಿಯಲೊಂದು ಮನೆಯ ಮಾಡಿ ನೆರೆ ತೆರೆಗಳಿಗೆ ಅಂಜಿದಡೆ ಎಂಥಯ್ಯ. ಸಂತೆಯೊಳಗೊಂದು ಮನೆಯ ಮಾಡಿ ಶಬ್ದಗಳಿಗೆ ನಾಚಿದೊಡೆ ಎಂಥಯ್ಯ

ಚನ್ನಮಲ್ಲಿಕಾರ್ಜುನದೇವ ಕೇಳಯ್ಯ ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬಂದೆಡೆ ಮನದಲ್ಲಿ ಸಮಾಧಾನಿಯಾಗಿರಬೇಕು.

**ಇಳೆ ನಿಂಬೆ ಮಾವು ಮಾದಲಕೆ ಹುಳಿ ನೀರ ಎರೆದವರಾರಯ್ಯ**
**ಕಬ್ಬು ಬಾಳೆ ಹಲಸು ನಾರಿವಾಳಕ್ಕೆ ಸಿಹಿ ನೀರ ಎರೆದವರಾರಯ್ಯ**
**ಕಳವೆ ರಾಜಾನ್ನ ಶಾಲ್ಯಾನ್ನಕ್ಕೆ, ಓಗರದ ಉದಕವನೆರೆದವರಾರಯ್ಯ**
**ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ ಪರಿಮಳದುದಕವನೆರೆದವರಾರಯ್ಯ**
**ಇಂತಿ ಜಲನು ಒಂದೆ ನೆಲನು ಒಂದೆ ಆಕಾಶವು ಒಂದೆ**
**ಹಲವು ದ್ರವ್ಯಂಗಳ ಕೂಡಿ**
**ತನ್ನ ಪರಿ ಬೇರಾಗಿಹ ಹಾಗೆ**
**ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯನು**
**ಹಲವು ಜಗಂಗಳ ಸುತ್ತಿಕೊಂಡಿರ್ದಡೇನು? ತನ್ನ ಪರಿ ಬೇರೆ.**
**(ವಚನ ಸಂಖ್ಯೆ 78)**

ಮೇಲಿನ ವಚನಗಳು ವ್ಯಕ್ತಿ ಜಗದಲ್ಲಿ ಇರಬೇಕಾದ ಅನುಸರಿಸಬೇಕಾದ ಎಚ್ಚರ ಹಾಗೂ ರೀತಿಗಳನ್ನು ಕುರಿತು ಹೇಳುತ್ತದೆ. ಜೈವಿಕ ಜೀವ ಜಗತ್ತು ನಾನಾರೂಪ, ಗುಣ, ರೀತಿ, ರುಚಿ, ಸ್ವಭಾವಗಳಿಂದಾದದು. ಹಾಗೆಯೇ (ನಾಗರೀಕ) ಮನುಜ ಸಂಸ್ಕೃತಿಯಲ್ಲೂ ಅನೇಕ ರೀತಿ, ಗುಣ, ಸ್ವಭಾವ, ರುಚಿ, ರೂಪಗಳು ಇರುತ್ತವೆ. ಹಾಗಾಗಿ ಸಮಯೋಚಿತ ಪ್ರಜ್ಞೆಯೊಂದಿಗಿನ, ಪ್ರಕೃತಿಯ ಸಹಜ ನಡೆ ಅರಿತಾಗ, ಮನುಜ ಅನೇಕ ಸಮಸ್ಯೆಗಳಿಂದ, ನೋವು, ತಾಪಗಳಿಂದ ದೂರಾಗಿ ವಿವೇಕಿ, ಪ್ರಜ್ಞಾವಂತನಾಗಿ ಬಾಳಬಹುದು ಎಂಬರ್ಥ ಕಂಡುಬರುತ್ತದೆ. ಅಂಜುವಿಕೆ, ನಾಚುವಿಕೆ, ಸಿಹಿ, ಹುಳಿ, ಘಮ ಇವೆಲ್ಲವು ಮಾನುಷ ನಾಗರೀಕ ಪ್ರಪಂಚದ ಇಂದ್ರಿಯ ಸತ್ಯಗಳು. ಕೇವಲ ಇಂದ್ರಿಯಾನುಭವಕ್ಕೆ ಸೀಮಿತವಾಗಿಬಿಟ್ಟರೆ ಮನುಜನ ಮನಸ್ಸು ಬೆಳೆಯಲಾರದು. ದೈವದ ನಿಲುವು ಸ್ವರೂಪ ಅರಿಯಲು ಸಾಧ್ಯವಿಲ್ಲ. ಹಾಗು ವ್ಯಕ್ತಿಯೋರ್ವನ ನಿಲುವುಗಳು ಸಮಾಜಕ್ಕೆ ಮುಖಾಮುಖಿಯಾದಾಗ ಹೇಗಿರಬೇಕು, ಮನುಜ ಸಮಾಜದಲ್ಲಿ ಇದ್ದ ಬಳಿಕ ಸ್ತುತಿ, ನಿಂದೆಗಳಿಗೆ ಹೆದರದೆ ಸಮಾಧಾನಿಯಾಗಿರಬೇಕು ಎನ್ನುತ್ತಾಳೆ. ಈ ಜೀವನ ಪ್ರಜ್ಞೆಯನ್ನು ಪ್ರಕೃತಿಯಲ್ಲಿನ ಉದಾಹರಣೆಗಳೊಂದಿಗೆ ವಿವರಿಸುತ್ತಾಳೆ. ಈ ವಚನಗಳು ಮನುಜನ ಮಾನಸಿಕ,

ಸಾಮಾಜಿಕ ಕೊಳುಕೊಡೆ ಹಾದಿಯ ಸ್ವರೂಪವನ್ನು ನೀಡುತ್ತದೆ.

**ಬೆಟ್ಟಕ್ಕೆ ಸಾರ ಇಲ್ಲವೆಂಬರು ತರುಗಳು ಹುಟ್ಟುವ ಪರಿ ಎಂಥಯ್ಯ?**
**ಇದ್ದಲಿಗೆ ರಸ ಇಲ್ಲೆಂಬರು ಕಬ್ಬಿನ ಕರಗುವ ಪರಿ ಎಂಥಯ್ಯ?**
**ಎನಗೆ ಕಾಯ ಇಲ್ಲೆಂಬರು ಚೆನ್ನಮಲ್ಲಿಕಾರ್ಜುನನೊಲಿವ ಪರಿ ಇನ್ನೆಂಥಯ್ಯ?**
**ಹೂವು ಕಂದಿದಲ್ಲಿ ಪರಿಮಳವ ನರಸುವರೇ**
**ಕಂದನಲ್ಲಿ ಕುಂದ ನರಸುವರೇ**
**ಎಲೆ ದೇವ ಸ್ನೇಹವಿದ್ದ ಠಾವಿನೊಳು ದ್ರೋಹವಾದ ಬಳಿಕ**
**ಮರಳಿ ಸದ್ಗುಣ ನರಸುವರೇ?**
**ಎಲೆ ದೇವ ಬೆಂದ ಹುಣ್ಣಿಗೆ ಬೇಗೆಯನಿಕ್ಕುವರೆ?**
**ಕೇಳಯ್ಯ ಶ್ರೀ ಶೈಲ ಚನ್ನಮಲ್ಲಿಕಾರ್ಜುನ ಹೊಳೆ ಇಳಿದ ಬಳಿಕ ಅಂಬಿಗನಿಗೇನುಂಟು? ವಚನ ಸಂಖ್ಯೆ:- 428**

**ಹಣ್ಣು ಮದ್ದ ಬಳಿಕ ಆ ಮರವನಾರು ತರಿದರೇನು?**
**ಹೆಣ್ಣು ಬಿಟ್ಟ ಬಳಿಕ ಆಕೆಯನಾರು ಕೂಡಿದರೇನು?**
**ಮಣ್ಣು ಬಿಟ್ಟ ಬಳಿಕ ಆಕೆಯ್ಯನಾರು ಉತ್ತಡೇನು? ಚನ್ನಮಲ್ಲಿಕಾರ್ಜುನನರಿದ ಬಳಿಕ ಆ ಕಾಯವನಾಯಿ ತಿಂದಡೇನು.**

ಹಣ್ಣು, ಹೆಣ್ಣು, ಮಣ್ಣು ಜಗತ್ತಿನ ಸಂಪತ್ತುಗಳು ಇವುಗಳಿಲ್ಲದೆ ಮನುಜನ ನಾಗರೀಕ ಜಗತ್ತೇ ಇಲ್ಲ. ಇವುಗಳಿಗಾಗಿ ಕದನಗಳೆ ನಡೆದಿವೆ. ಇವುಗಳನ್ನು ಮಾಯೆ ಎಂದು ಸಿದ್ಧಾಂತಗಳು ವರ್ಣಿಸುತ್ತವೆ. ಈ ವಚನ ಅದರ ವಾಸನೆಗಳಿಂದ, ಆಸೆಗಳಿಂದ ಮುಕ್ತನಾದ ಮನುಜ ಹೇಗಿರಬೇಕು ಎಂದು ಹೇಳುತ್ತ ಸಾಗುವಾಗ ಪ್ರಕೃತಿಯ ಭಾಗವೇ ಜಗತ್ತಿನ ಸಮಸ್ತ ಸೃಷ್ಟಿಯಲ್ಲವೆ ಎಂಬ ಭಾವವೊಂದು ನುಸುಳಿ ಹೋಗುವಂತೆ ಮಾಡುತ್ತದೆ. ಹೆಣ್ಣಿನಿಂದ ದೂರಾದಮೇಲೆ, ಹಣ್ಣುಗಳಿಲ್ಲದ ಮರ, ಮಣ್ಣ ಮೋಹಗಳಿಂದ ದೂರಾದವಂಗೆ ಹೆಣ್ಣು, ಮಣ್ಣು, ಮರ ಏನಾದರೇನು ಅದರೊಂದಿಗಿನ ಮೋಹವೇಕೆ ಎಂದು ಪ್ರಶ್ನಿಸುತ್ತದೆ.

**ಕದಳಿ ಎಂಬುದು ತನು ಕದಳಿ ಎಂಬುದು ಮನ**
**ಕದಳಿ ಎಂಬುದು ವಿಷಯಂಗಳು.**
**ಕದಳಿ ಎಂಬುದು ಭವಘೋರಾರಣ್ಯ**
**ಈ ಕದಳಿ ಎಂಬುದನ್ನು ಗೆದ್ದು ತವೆ ಬದುಕಿಬಂದು**
**ಕದಳಿಯ ಬನದಲ್ಲಿ ಭವಹರನ ಕಂಡೆನು**
**ಭವಗೆದ್ದು ಬಂದ ಮಗಳೆ ಎಂದು**
**ಕರುಣದಿ ಕರುಣದಿ ತೆಗೆದು ಬಿಗಿಯಪ್ಪಿದಡೆ**
**ಚನ್ನಮಲ್ಲಿಕಾರ್ಜುನನ ಹೃದಯ ಕಮಲದಲಿ ಅಡಗಿದೆನು.**

ಕದಳಿ ಎಂಬ ಹೋಲಿಕೆಯೊಂದಿಗೆ ದೇಹ, ಮನಸ್ಸು, ಇಂದ್ರಿಯ, ಬದುಕನ್ನು ನೋಡುವ ಅಕ್ಕಳನ್ನು ನೋಡಿ ಮಲ್ಲಿಕಾರ್ಜುನ ಭವಗೆದ್ದು ಬಂದ ಮಗಳನ್ನು

ಕರುಣದಿ ಬಂದು ಅಪ್ಪಿದಡೆ ಅವನ ಹೃದಯ ಕಮಲದಲ್ಲಿ ತನಗೆ ಸ್ಥಳ ದೊರೆಯಿತು ಎಂದು ಅಕ್ಕ ಹೇಳುತ್ತಾಳೆ. ಪ್ರಕೃತಿ ಎಂಬುದು ಅವಳ ದೇಹ ಪ್ರಜ್ಞೆಯ, ಆತ್ಮ ವಿಕಸನದ ಹಾದಿಯ ಪ್ರಜ್ಞೆಯ ಭಾಗವೇ ಆಗಿತ್ತು.

ದೇಹವಿಲ್ಲದೆ ಅನುಭವಗಳಿಲ್ಲ, ಬದುಕಿಲ್ಲದೆ ಯಾವುದು ಈ ಜೀವನಕ್ಕೆ ಸಿಗದು. ಹಾಗಾಗಿ ಬದುಕು, ದೇಹ ಬಹಳ ಮುಖ್ಯವಾದುದು. ದೇಹವಿದ್ದರೆ ಮಾತ್ರ ದೈವದ ಅನುಭವ. ದೇಹವೇ ಇಲ್ಲದಾದಾಗ ದೈವವನ್ನು ಅರಿಯಲು ಸಾಧ್ಯವೇ ಇಲ್ಲ. ಪರಂಪರೆಯಲ್ಲಿದ್ದಂತಹ ದೇಹ ಅಮುಖ್ಯ, ಆತ್ಮ ಶ್ರೇಷ್ಠ ಎಂಬ ಅಂಶಕ್ಕೆ ಅಕ್ಕ ಇಲ್ಲಿ ಭಿನ್ನವಾಗಿ ನಿಲ್ಲುತ್ತಾಳೆ. ಕಾಯವೇ ಇಲ್ಲವೆಂದಾದರೆ ದೈವವನ್ನು ಒಲಿಸಿಕೊಳ್ಳುವ ಪರಿ ಹೇಗೆ ಎಂದು ಸ್ಪಷ್ಟಪಡಿಸಿಕೊಳ್ಳಲು ಬೆಟ್ಟ, ಇದ್ದಿಲು, ತರು, ಕರಗಬೇಕಾಗಿರುವ ಕಬ್ಬಿಣ ತರುತ್ತಾಳೆ.

ಹೂವು, ಕಂದ, ಸದ್ಗುಣ, ಬೆಂದ ಹುಣ್ಣು ಈ ವಸ್ತುಗಳ ಹಿನ್ನಲೆಯಲ್ಲಿ ಪರಿಮಳ, ಮುಗ್ಧತೆ, ನಂಬಿಕೆ, ಸ್ನೇಹ, ಅರಸುತ್ತಾ ದೈವದ ಅನುಭವಗಳಿಗೆ ಒಳಗಾಗಬಹುದು. ಕಾರ್ಯ ಕಾರಣ ಸಂಬಂಧ ಅಳಿದ ಮೇಲೂ ಉಳಿಯುವ ಸಂಬಂಧ ಯಾವುದಿದೆ ಎಂದು ಪ್ರಶ್ನಿಸುತ್ತಲೇ ಸಂಬಂಧಗಳನ್ನು, ಅನುಭವಗಳನ್ನು ಅರಿಯಲು ಪ್ರಯತ್ನಿಸುತ್ತಾಳೆ. ಸಮಾಜ ಕಟ್ಟಿಕೊಟ್ಟ ದೃಷ್ಟಿಗಿಂತಲೂ ಬೇರಾದ ಆಲೋಚನೆ ಕಾಣಬಹುದು.

''ಹೆದರದಿರು ಮನವೆ ಬೆದರದಿರು ತನುವೆ ನಿಜವರಿತು ನಿಶ್ಚಿಂತನಾಗಿರು, ಫಲವಾದ ಮರನ ಕಲ್ಲಲ್ಲಿ ಇಡುವುದೊಂದೇಕೋಟಿ ಭಕ್ತಿಯುಳ್ಳವರ ಬೈವರೊಂದುಕೋಟಿ, ಭಕ್ತಿಯಿಲ್ಲದವರ ಬೈವರೊಬ್ಬರ ಕಾಣಾ ಚೆನ್ನಮಲ್ಲಿಕಾರ್ಜುನ.'' ಮರದ ಕಲ್ಪನೆಯನ್ನ ಇವಳಿಗಿಂತ ಬಹುಶಃ ಯಾರು ಭಿನ್ನವಾಗಿ ತೋರಿರಕ್ಕಿಲ್ಲ. ಹಣ್ಣಿರುವ ಮರಕ್ಕೆ ನೂರೆಂಟು ಕಲ್ಲೇಟು. ಹಾಗೆಯೇ ಸಜ್ಜನರಿಗೆ, ಭಕ್ತರಿಗೆ ಸದಾ ಸವಾಲುಗಳೇ. ಭಕ್ತಿ ಎಂಬುದು ಗರಗಸದ ಹಾಗೆ ಹೋಗುತ್ತ ಕೊಯ್ಯುವುದು ಬರುತ್ತ ಕೊಯ್ಯುವುದು ಎಂದು ವಚನಕಾರನೊಬ್ಬ ಹೇಳಿದರೆ. ಅಕ್ಕನಲ್ಲಿ ಅದೊಂದು ಹಣ್ಣಿರುವ ಮರ ಅಲ್ಲಿಗೆ ಸದಾ ಗುರಿಯಿಟ್ಟು ಹೊಡೆಯುವವರು ಕೋಟಿ. ಭಕ್ತನಾಗುವುದು ಎಂದರೆ ಲೋಕದೊಂದಿಗೆ ನಿರಂತರ ಹೋರಾಟಕ್ಕೆ ಸದಾ ಸಿದ್ಧನಾಗುವುದು. ಭಕ್ತನ ಸ್ಥಿತಿಯನ್ನ ಪ್ರಕೃತಿಯ ಹೋಲಿಕೆಗಳೊಂದಿಗೆ ಇವಳಷ್ಟು ಗಂಭೀರವಾಗಿ ಯಾರು ಅರ್ಥೈಸಿರಲಾರರು.

**ತನು ಕರಗದವರಲ್ಲಿ ಮಜ್ಜನವನೊಲ್ಲಯ್ಯ ನೀನು**
**ಮನ ಕರಗದವರಲ್ಲಿ ಪುಷ್ಪವನೊಲ್ಲಯ್ಯ ನೀನು**
**ಹದುಳಿಗರಲ್ಲಿ ಗಂಧಕ್ಷತೆಯನೊಲ್ಲೆಯಯ್ಯ ನೀನು**
**ಅರಿವು ಕಣ್ತೆರೆಯದವರಲ್ಲಿ ಆರತಿಯನೊಲ್ಲೆಯಯ್ಯ ನೀನು**

**ಭಾವ ಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯ ನೀನು,**

ಪರಿಣಾಮಿಗಳಲ್ಲದವರಲ್ಲಿ ನೈವೇಧ್ಯವನೊಲ್ಲೆಯಯ್ಯ ನೀನು ತ್ರಿಕರಣ ಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯ ನೀನು ಹೃದಯ ಕಮಲ ಅರಳದವರಲಿ ಇರಲೊಲ್ಲೆಯ್ಯಾ ನೀನು ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ ಹೇಳಾ ಚನ್ನಮಲ್ಲಿಕಾರ್ಜುನಯ್ಯ?

ದೈವ ಯಾರಿಗೆ ಒಲಿದೀತು ತನ್ನಲ್ಲಿ ಯಾಕೆ ನೆಲೆ ನಿಂತಿತು ಎಂಬ ಪ್ರಶ್ನೆಗೆ ಪ್ರಕೃತಿಯೊಂದಿಗಿನ ಹೂವು, ನೀರು, ಅಕ್ಷತೆ ಕಾಳು ಭವಿಗಳು ಕೈಗೊಳ್ಳುವ ಪೂಜೆಯೊಂದರ ಕ್ರಮ ಧೂಪ, ದೀಪ, ನೈವೇಧ್ಯ ಎಂಬ ಸಿದ್ಧತೆಗಳಿಗೆ ಹೋಲಿಸಿಕೊಂಡು ತನಗೇಕೆ ಒಲಿದ ಎಂದು ಅರ್ಥೈಸಿಕೊಳ್ಳಲು ಪ್ರಯತ್ನಿಸಿರುವ ಅವಳ ಈ ಪರಿ ವಿಶೇಷವಾದದ್ದು. ತನು, ಮನ, ಭಾವ ಶುದ್ಧವಿಲ್ಲದವರಲ್ಲಿ ದೈವ ಹರಿದು ಬರಲಾರದು. ಮನಸ್ಸು, ಬುದ್ಧಿ, ದೇಹ ಎಂಬ ಮೂರು ಶುದ್ಧವಾಗಿರುವವರಿಗೆ ದೈವ ಕೈಯಲ್ಲಿ ಬಂದು ನೆಲೆಗೊಳ್ಳುತ್ತಾನೆ ಎಂದು ಹೇಳುತ್ತಾಳೆ. ಪ್ರಕೃತಿ ಅವಳ ಜೀವನದ ಆಗುಹೋಗುಗಳಲ್ಲಿ ಒಂದಾದ ಭಾವ. ತನ್ನನ್ನು ತಾನು ಅರಿಯಲು ಇರುವ ಹಾದಿಯಾಗಿತ್ತು.

**ಲೋಕದ ಚೇಷ್ಟೆಗೆ ರವಿ ಬೀಜವಾದಂತೆ ಕರಣಂಗಳ**
**ಚೇಷ್ಟೆಗೆ ಮನವೇ ಬೀಜ. ಎನಗುಳ್ಳುದೊಂದು ಮನ. ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ ಎನಗೆ**
**ಭವವುಂಟೇ ಚೆನ್ನಮಲ್ಲಿಕಾರ್ಜುನ?**

ಜಗದ ಚಲನೆಗೆ ರವಿಯೇ ಕಾರಣ ಹಾಗೆಯೇ ಇಂದ್ರಿಯಗಳ ಚೇಷ್ಟೆಗೆ ಮನಸ್ಸೇ ಕಾರಣ. ಕಾರಣಗಳನ್ನು ರವಿ, ಬೀಜದ ಹೋಲಿಕೆಯೊಂದಿಗೆ ಸಮರ್ಥವಾಗಿ ಬಳಸುವ ರೀತಿ ಗಮನಿಸಿದರೆ ಅಕ್ಕನಿಗೆ ತನ್ನ ಸವಾಲುಗಳನ್ನು ಅರ್ಥೈಸಿಕೊಳ್ಳಲು ಹಾಗೂ ಜಗತ್ತಿನೊಂದಿಗೆ ವ್ಯವಹರಿಸಲು ಹಾಗೂ ದೈವದೊಡನೆ ಪ್ರಶ್ನಿಸಲು ಇದ್ದ ಏಕಮೇವ ಮಾರ್ಗವೆಂದರೆ ಅದು ಪ್ರಕೃತಿಯೇ ಆಗಿತ್ತು ಎಂಬುದು ಈ ವಚನದಿಂದ ಕಾಣಬಹುದು. ಅಕ್ಕನ ಮುನ್ನೂರಕ್ಕೂ ಅಧಿಕ ವಚನಗಳಲ್ಲಿನ ಹದಿನೇಳು ವಚನಗಳನ್ನು ಬಳಸಿಕೊಂಡು ಪ್ರಕೃತಿ ಸೌಂದರ್ಯ ಪ್ರಜ್ಞೆ ಕೇವಲ ಕಣ್ಣಿನ ಇಂದ್ರಿಯದ ಒಂದು ಭಾಗವಾಗಿ ನೋಡದೆ ಅವಳ ಅನುಭವದ ಭಾಗವಾಗಿ, ಅದನ್ನು ಅಕ್ಕ ಅಭಿವ್ಯಕ್ತಿಸಿರುವ ಭಾಷೆಯ ಭಾಗವಾಗಿ ಅವಳತನದ ಭಾಗವಾಗಿ ನೋಡಲು ಪ್ರಯತ್ನಸಿರುವೆ. ಇದೊಂದು ಅಂತಿಮ ರೂಪವೇನಲ್ಲ. ಒಂದು ಆಪ್ತವಾದ ನಿಕಟವಾದ ಓದು ಅಷ್ಟೆ ಎಂದು ಹೇಳಬಯಸುತ್ತೇನೆ.

**ಪರಾಮರ್ಶನ ಗ್ರಂಥಗಳು:**


1. ಕಲಬುರ್ಗಿ ಎಂ.ಎಂ., (2016), ಬಸವಯುಗ ಮಹಾಸಂಪುಟ–1. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
2. ನಾರಾಯಣ ಪಿ.ವಿ., (2018), ಅಕ್ಕನ ವಚನಗಳು ( ವಚನಗಳ ಆಯ್ಕೆ ಮತ್ತು ಟಿಪ್ಪಣಿಗಳು), ಅಂಕಿತ ಪುಸ್ತಕ, ಬೆಂಗಳೂರು.
3. ಆಶಾದೇವಿ ಎಂ.ಎಸ್., (2021), ನಡುವೆ ಸುಳಿವ ಆತ್ಮ: ಸ್ತ್ರೀಸಂಕಥನದ ಚಹರೆಗಳು, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ.
4. ಚಿದಾನಂದಮೂರ್ತಿ ಎಂ., (2013), ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ: ವಚನ ಸಾಹಿತ್ಯ (ಸಂಪುಟ–5), ಸ್ವಪ್ನ ಬುಕ್ ಹೌಸ್, ಬೆಂಗಳೂರು.
5. ಚಂದ್ರಶೇಖರ ಟಿ.ಆರ್., (2004), ವಚನ ಸಂಸ್ಕೃತಿಯ ಸಾಮಾಜಿಕ ಆಯಾಮಗಳು, ಸಿವಿಜಿ ಪ್ರಕಾಶನ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.